**ಓಎಸ್ ನಂಃ 65/2017 ಡಿ.ಡಬ್ಲ್ಯೂ - 2**

**ದಿನಾಂಕಃ 09.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ಪಾಟೀಸವಾಲುಃ ವಾದಿಯ ಪರ ಶ್ರೀ ಟಿ.ವಿ.ಎಸ್. ವಕೀಲರಿಂದಃ

ನೀವು ವಿದ್ಯಾಭ್ಯಾಸ ಮಾಡಿರುತ್ತೀರಾ ಎಂದರೆ ವಿದ್ಯಾಭ್ಯಾಸ ಮಾಡಿಲ್ಲ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿ ಕೊಟ್ರಿರುತ್ತಾರೆ ಎಂದರೆ ನಾನೇ ಕೊಟ್ಟಿರುತ್ತೇನೆ. 1 ನೇ ಪ್ರತಿವಾದಿ ದ್ಯಾವಪ್ಪ ನಿಮ್ಮ ಸಂಬಂಧಿಕರು ಎಂದರೆ ಇಲ್ಲ ಎನ್ನುತ್ತಾರೆ. ವಾದಿ ಯಾವ ಕಾರಣಕ್ಕಾಗಿ ದಾವೆ ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಎಲ್ಲಾ ಸರ್ಕಾರಿ ಬೆಟ್ಟದ ಜಮೀನು. ಸಾಕ್ಷಿ ಮುಂದುವರೆದು ನಾವು ದಾರಿ ಬಿಟ್ಟಿಲ್ಲ ಎಂದು ಹಾಕಿರುತ್ತಾರೆ. ದಾವಾ ಆಸ್ತಿ ಚೆಕ್ಕುಬಂದಿ ಹೇಳಲು ಬರುತ್ತದಾ ಎಂದರೆ ಇಲ್ಲ ಎನ್ನುತ್ತಾರೆ. ಸ.ನಂ. 97 ರ ಚಕ್ಕುಬಂದಿ ಹೇಲೀಸಾಕ್ಷಿ ಹೊತ್ತು ಮುಳುಗುವ ಕಡೆ ನಮ್ಮ ಜಮೀನು ಉಳಿದ ಕಡೆ ಸರ್ಕಾರಿ ಬೆಟ್ಟ. ವಾದಿಗೆ ಅಥವಾ ವಾದಿಗೆ ಗಂಡನಿಗೆ ಸರ್ಕಾರಿದಿಂದ ಮಂಜೂರಾಗಿಲ್ಲ ಎನ್ನುವ ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೇನೆ. ವಾದಿ ಹಾಗೂ ವಾದಿ ಗಂಡ ದಾವಾ ಆಸ್ತಿಯಲ್ಲಿ ಸ್ವಾದಿನದಲ್ಲಿ ಇರುತ್ತಾರೆ ಎಂದರೆ ಎಲ್ಲಾ ಫಾರೆಸ್ಟ್ ಜಮೀನು ಎನ್ನುತ್ತಾರೆ. ದಾವಾ ಆಸ್ತಿ ಬೆಟ್ಟ ಗುಡ್ಡ ಅರಣ್ಯ ಪ್ರದೇಶ ಸುಳ್ಳು ಹೇಳುವುದು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ದುರ್ಗಾಪರಮೆಶ್ವರಿ ದೇವಸ್ಥಾನ ವಾದಿ ನಿರ್ಮಾಣ ಮಾಡಿರುತ್ತಾರೆ ಎಂದರೆ ಸುಳ್ಳು ಎನ್ನುತ್ತಾರೆ. ದುರ್ಗಾ ಪರಮೇಶ್ವರಿ ದೇವಸ್ಥಾನ ಎಷ್ಟು ಅಡಿಗಳು ಇರುತ್ತವೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ವಾದಿ ನಿಮ್ಮ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ ಎಂದರೆ

ಸುಮ್ಮಸುಮ್ಮನೆ ನೀಡಿರುತ್ತಾರೆ ಎನ್ನುತ್ತಾರೆ. ನಿಮ್ಮ ವಿರುದ್ಧ ದೂರು ಇರುವ ಕಾರಣ ಪಕ್ಕದ ನ್ಯಾಯಲಯದಲ್ಲಿ ಪ್ರಕರಣ ಇರುತ್ತದೆ ಎಂದರೆ ಸಾಕ್ಷಿ ರಾಜಿ ಮಾಡಿಕೊಂಡಿರುತ್ತೆವೆ. ವಾದಿ ಗಂಡ ತೀಕೊಂಡ ನಂತರ ಆವರಿಗೆ ಯಾರು ಇಲ್ಲ ಎಂದು ನೀವು ಹಾಗೂ 1 ನೇ ಪ್ರತಿವಾದಿ ಸೇರಿಕೊಂಡು ತೊಂರೆ ನಿಡೀರುತ್ತೀರಾ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗೆ ಮಂಜೂರು ಆಗಿರುತ್ತದೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.